ಸಲ್ಲಿಸಿರುವವರನ್ನು ಸರ್ಕಾರಿ ಸೇವೆಯಲ್ಲಿ ಖಾಯಂಗೊಳಿಸುವ ಅವಕಾಶವಿರುವಾಗ ಈ ನೌಕರರನ್ನು ಖಾಯಂಗೊಳಿಸದಿರಲು ಕಾರಣವೇನು?

ಶ್ರೀ ಎಸ್. ಕುಮಾರ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ನಗರಾಭಿವೃದ್ಧಿ ಇಲಾಖೆಯು ದಿನಾಂಕ 1-1-86ನ್ನು ದಿನಗೂಲಿ ನೌಕರರ ಸಕ್ರಮಾತಿಗೆ ಗಡುವು ದಿನಾಂಕವೆಂದು ನಿಗದಿಗೊಳಿಸಿರುತ್ತದೆ. ಈ ದಿನಾಂಕಕ್ಕೆ ಮೊದಲು ದಿನಗೂಲಿಯ ಮೇಲೆ ನೇಮಕವಾಗಿರುವವರ ಸೇವೆಯನ್ನು ಸಕ್ರಮಗೊಳಿಸುವುದು ಸರ್ಕಾರದ ನೀತಿಯಾಗಿರುತ್ತದೆ.

ಆ) ಹೌದು

ಇ) (ಅ)ಗೆ ನೀಡಿರುವ ಉತ್ತರ ದನ್ವಯ ದಿನಾಂಕ 1-1-86ರ ನಂತರದ ಅವಧಿಯಲ್ಲಿನ ನೌಕರರನ್ನು ಖಾಯಂಗೊಳಿಸಲು ಅವಕಾಶವಿರುವುದಿಲ್ಲ.

ಮುಲ್ಕಿಗೆ ನೀರು ಸರಬರಾಜು ಮಾಡುವ ಪ್ರಮುಖ ಬಾವಿಯು ಕುಸಿದು ಬಿದ್ದಿರುವ ಬಗ್ಗೆ

1537 (1924) ಶ್ರೀ ಅಭಯಚಂದ್ರ ಕೆ (ಮೂಡಬಿದ್ರೆ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಲ್ಕಿಗೆ ನೀರು ಸರಬರಾಜು ಮಾಡುವ ಪ್ರಮುಖ ಬಾವಿಯು ಕುಸಿದು ಬಿದ್ದುದರಿಂದ ಕುಡಿಯುವ ನೀರಿನ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮಳೆಗಾಲದಲ್ಲಿ ನೀರು ಪೂರೈಕೆ ತೊಂದರೆಯಾಗದಂತೆ ಸರ್ಕಾರವು ಯಾವ ಕ್ರಮವನ್ನು ಕೈಗೊಳ್ಳುವುದು?

ಇ) ಈ ಬಾವಿಯ ಪುನರ್ ನಿರ್ಮಾಣಕ್ಕೆ ಸರ್ಕಾರದಿಂದ ವಿಶೇಷ ಅನುದಾನ ಕೊಡಲಾಗುವುದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಬಂದಿದೆ

ಆ) ಕುಸಿದ ಬಾವಿಯಿಂದ ಮುಲ್ಕಿ ಪಟ್ಟಣದ ಬಪ್ಪನಾಡು (ಕಾನ್ವೆಂಟ್) ಬಳಿ ಇರುವ ಮೇಲ್ಮಟ್ಟದ ಜಲಸಂಗ್ರಹಾಗಾರಕ್ಕೆ ನೀರನ್ನು ಪೂರೈಸಲಾಗುತ್ತಿತ್ತು. ಬರ ಪರಿಹಾರ ಯೋಜನೆ 2002ರ ಅಡಿಯಲ್ಲಿ ಬಪ್ಪನಾಡು (ಕಾನ್ವೆಂಟ್) ಮೇಲ್ಪಟ್ಟದ ಜಲಸಂಗ್ರಹಾಗಾರದ ಹತ್ತಿರವಿರುವ ಅಕ್ಕಸಾಲಿಗರ ಕೇರಿ ರಸ್ತೆಯಲ್ಲಿ ಹೊಸ ಕೊಳವೆ ಬಾವಿ ಕೊರೆಯಲಾಗಿದ್ದು, ಇದರಲ್ಲಿ ಗಂಟೆಗೆ 1200 ಗ್ಯಾಲನ್ ನೀರು ದೊರೆತಿರುತ್ತದೆ. ಈ ಕೊಳವೆ ಬಾವಿಗೆ ನಗರ ಪಂಚಾಯತ್ ವತಿಯಿಂದ 5.00 ಹೆಚ್.ಪಿ ಸಾಮರ್ಥ್ಯದ ಪವರ್ ಪಂಪ್ ಮಾಡಿ ಅಲ್ಲಿಂದ ಸದರಿ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಮುಲ್ಕಿ ನಗರಕ್ಕೆ ಶಾಶ್ವತ ನೀರು ಸರಬರಾಜು ಒದಗಿಸುವ ಯೋಜನೆಗೆ ಸರ್ಕಾರವು ತನ್ನ ಆದೇಶ ಸಂಖ್ಯೆ ನಆಇ 15 ಯುಡಬ್ಲ್ಯೂಎಸ್ 98, ದಿನಾಂಕ 16.1.2002ರಲ್ಲಿ ರೂ. 412.36 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವ ಸಲುವಾಗಿ ಟೆಂಡರನ್ನು ಈಗಾಗಲೇ ಕರೆಯಲಾಗಿದೆ. ಗುತ್ತಿಗೆದಾರರನ್ನು ನೇಮಿಸಿದ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆ ಪೂರ್ಣಗೊಂಡ ನಂತರ ಮುಲ್ಕಿ ಪಟ್ಟಣಕ್ಕೆ ಶಾಶ್ವತ ನೀರು ಸರಬರಾಜು ವ್ಯವಸ್ಥೆ ಒದಗಿಸಬಹುದಾಗಿದೆ.

ಇ) ಮೇಲಿನ ಯೋಜನೆ ಕಾರ್ಯಗತಗೊಂಡ ನಂತರ ಹೊಸ ಬಾವಿಯ ಅವಶ್ಯಕತೆ ಬರುವುದಿಲ್ಲ.

ಲಿಂಗಸೂಗೂರು ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ

1538 (554) ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸೂಗೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಯಚೂರು ಜಿಲ್ಲೆಯ ಲಿಂಗಸೂಗೂರು ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆಯು ಸಧ್ಯದಲ್ಲಿ ಯಾವ ಹಂತದಲ್ಲಿದೆ?

2) ಸದರಿ ಯೋಜನೆಗೆ ನಿಗದಿಪಡಿಸಿದ ಒಟ್ಟು ಅಂದಾಜು ಹಣವೆಷ್ಟು

3) ಸದರಿ ಯೋಜನೆಗೆ ಇಲ್ಲಿಯವರೆಗೆ ಒಟ್ಟು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ. ಕಾಮಗಾರಿಯು ಮಂದಗತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಸದರಿ ಯೋಜನೆಯು ಯಾವಾಗ ಮುಕ್ತಾಯಗೊಳ್ಳುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

1) ಈ ಯೋಜನೆಗೆ ಇಂಪೌಂಡಿಂಗ್ ಜಲಾಶಯ ಮತ್ತು ಚಾಕ್ವೆಲ್ ಕಂ ಪಂಪ್ ಹೌಸ್‌ನ ಕಾಮಗಾರಿಯು ಶೇ. 90ರಷ್ಟು ಮುಗಿದಿದ್ದು ಒಟ್ಟಾರೆ ಯೋಜನೆಯ ಕಾಮಗಾರಿಗಳು ಶೇ. 70ರಷ್ಟು ಮುಗಿದಿರುತ್ತದೆ. ಉಳಿದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

2) ಈ ಯೋಜನೆಗೆ ಮಂಜೂರಾಗಿರುವ ಅಂದಾಜು ವೆಚ್ಚ ರೂ. 1609.79 ಲಕ್ಷಗಳು.

3) ಇಲ್ಲಿಯವರೆಗೆ ಈ ಕಾಮಗಾರಿಗೆ ರೂ. 1013.05 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಯ ನೀರು ಸಂಗ್ರಹಣ ಕೆರೆ ಮತ್ತು ಜಲಶುದ್ಧೀಕರಣ ಘಟಕದ ಕಾಮಗಾರಿಗಳಿಗೆ ಭೂಸ್ವಾಧೀನತೆಯಲ್ಲಿನ ವಿಳಂಬದಿಂದಾಗಿ ಪ್ರಾರಂಭದಲ್ಲಿ ಕಾಮಗಾರಿ ಮಂದಗತಿಯಲ್ಲಿದೆ. ಈಗ ಕಾಮಗಾರಿಯು ಪೂರ್ಣ ಪ್ರಗತಿಯಲ್ಲಿದೆ.

4) ಈ ಕಾಮಗಾರಿಯನ್ನು ಮಾರ್ಚ್ 2003ಕ್ಕೆ ಮುಕ್ತಾಯಗೊಳಿಸಲು ಉದ್ದೇಶಿಸಲಾಗಿದೆ.

ರಾಜ್ಯದಲ್ಲಿರುವ ಪಟ್ಟಣ ಪಂಚಾಯಿತ್ತಿಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾಪ

1539 (1958) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಟ್ಟಣ ಪಂಚಾಯತ್ತಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು).

ಆ) ಈ ಪಟ್ಟಣ ಪಂಚಾಯ್ತಿಗಳನ್ನು ಉನ್ನತೀಕರಿಸಲು (ಮೇಲ್ದರ್ಜೆ) ಸರ್ಕಾರ ತೀರ್ಮಾನ ಕೈಗೊಂಡಿದೆಯೇ; ಯಾವಾಗಿನಿಂದ ಉನ್ನತೀಕರಿಸಲಾಗುವುದು.

ಇ) ಮೇಲ್ದರ್ಜೆಗೇರಿಸುವ ಕ್ರಮದ ಮಾನದಂಡಗಳೇನು;

ಈ) ಮೇಲ್ದರ್ಜೆಗೇರಿಸಲು ಉದ್ದೇಶಿಸಿರುವ ಪ್ರಸ್ತುತ ಪಟ್ಟಣ ಪಂಚಾಯ್ತಿಗಳ್ಯಾವುವು; ಕೊಡಗು ಜಿಲ್ಲೆಯ ಯಾವ ಪಟ್ಟಣ ಪಂಚಾಯ್ತಿಗಳು ಈ ಯೋಜನೆ ವ್ಯಾಪ್ತಿಗೊಳಪಡುತ್ತವೆ; ವಿವರ ನೀಡುವುದು.

ಉ) ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ಖರ್ಚು ಎಷ್ಟು?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :